# 7

# ನಿತ್ಯ ಜೀವದ ಭರವಸೆ

ನಿನಗೆ ತಿಳಿಯಲಾರದ ಸಂಗತಿಗಾಗಿ ಎಂದಾದರು ಜಿಗುಪ್ಸೆಗೊಂಡಿರುವೆಯಾ? ವೈದ್ಯರು ನಿನ್ನನ್ನು ಪರಿಕ್ಷಿಸಿ ನಿನಗಿರುವ ಖಾಯಿಲೆಯನ್ನು ಕಂಡುಹಿಡಿಯುವ ಮೊದಲೇ, ನಿನಗೆ ಏನೋ ಸಂಭವಿಸಿದೆ ಎಂದು ಹೇಳುವದು ನಿನ್ನ ತಪ್ಪಾಗಿರುತ್ತದೆ. ನೀನು ಯಾವದೋ ಸ್ಥಳಕ್ಕೆ ಹೊರಟು ಅದನ್ನು ತಲುಪವ ಮಾರ್ಗವನ್ನು ಅರಿಯದಿದ್ದರೆ ನಿನಗೇನಾಗಬಹುದು? ಪರೀಕ್ಷೆಯಲ್ಲಿ ಬರೆ ಯುವಾಗ, ಉತ್ತರವು ತಿಳಿಯದಿದ್ದರೆ ಏನಾಗಬಹುದು?

ಅದೇ ರೀತಿಯಲ್ಲಿ ಸತ್ಯವನ್ನು ಅರಿಯದೆ ಧರ್ಮವನ್ನು ಹೊಂದಿರುವದು ವೇದನೆಯಾಗಿರುತ್ತದೆ. ತಮಗೆ ಬೋಧಿಸಲ್ಪಟ್ಟ ಸಂಗತಿಗಳು ಸತ್ಯವೆಂದು ಅರಿಯದಿದ್ದ ಕ್ರೈಸ್ತರಿಗೆ ಯೋಹಾನನು ಬರೆದನು, ಆದ್ದರಿಂದ, "ಯೇಸು ದೇವರ ಮಗನೆಂದು ನೀವು ಅರಿಯಬೇಕೆಂದು! ಅವನು ಬರೆದನು, ಕ್ರಿಸ್ತನು ದೇವರ ಮಗನೆಂದು ಬರೆದನು! ಪಾಪದ ಮೇಲೆ ಜಯ ಹೊಂದಬಹುದು ಎಂದು ಬರೆದನು!"

ಈ ವಿಧವಾದ "ಅನಿಶ್ಚಯತೆಯು" ಉತ್ತುಂಗಕ್ಕೆ ಹೋದಾಗ, ಈ ಅಧ್ಯಾಯದ ಕೊನೇ ಭಾಗದಲ್ಲಿ "ನಿಮ್ಮಲ್ಲಿ ನಿತ್ಯಜೀವ ಉಂಟೆಂದು *ನಿಮಗೆ ಗೊತ್ತಾಗುವಂತೆ* ಈ ಮಾತುಗಳನ್ನು ಬರೆದಿದ್ದೇನೆ" ಎಂದು ಯೋಹಾನನು ಬರೆದನು (1 ಯೋಹಾನ 5:13; ಒತ್ತಿ ಹೇಳಿದ್ದು ನನ್ನದು).[1] "ನಿತ್ಯ ಜೀವದ ಭರವಸೆಯು" ಯೋಹಾನನ ಓದುಗರಿಗೆ ಅಗತ್ಯವಿತ್ತು.

## ಸಮಸ್ಯೆ

### ಆ ದಿನಗಳಲ್ಲಿದ್ದ ಸಮಸ್ಯೆಗಳು

ಗ್ನಾಸ್ಟಿಕರ ಬೋಧನೆಗೆ ಒಳಗಾಗಿ ಸಮಸ್ಯೆಯಲ್ಲಿದ್ದ ಅವನ ಓದುಗರಿಗೆ ಪರಲೋಕದಲ್ಲಿ ಅವರಿಗಾಗಿ ಇಡಲ್ಪಟ್ಟಿದ್ದ ಪ್ರತಿಫಲಗಳ ಅಗತ್ಯತೆಯಿತ್ತು. ಯಾಕೆಂದರೆ ಗ್ನಾಸ್ಟಿಕರು "ಎಲ್ಲವನ್ನು ಅರಿತವರು" ವಿಶೇಷ ಜ್ಞಾನವುಳ್ಳ ಕ್ರೈಸ್ತರು ಎಂದು ತಿಳಿದಿದ್ದರು. ಈ ದಿವಸಗಳಲ್ಲಿ ಅವರನ್ನು "ಎಲ್ಲವನ್ನು ಅವರು ತಿಳಿಯಬೇಕಾದವರು" ಎಂದು ಕರೆಯಬಹುದು. ಯೇಸು ಮಾನವನಾಗಿ ಬರಲಿಲ್ಲ, ಆದ್ದರಿಂದ ಪಾಪದಲ್ಲಿ ಜೀವಿಸುವವನನ್ನು ಕುರಿತು ದೇವರಿಗೆ ಯಾವುದೇ ಪರಿಣಾಮ ಬೀರುವದಿಲ್ಲ ಎಂದು ಅವರು ಬೋಧಿಸುತ್ತಿದ್ದರು.

ಇಂತಹ ತಿಳುವಳಿಕೆಯನ್ನು ಹೊಂದಿದ ಕ್ರೈಸ್ತರಿಗೆ, ಯೋಹಾನನ ಪತ್ರಿಕೆಯು, ಕೀಳರಿಮೆ ಉಂಟುಮಾಡಿರಬಹುದು. ನಾವು ಸತ್ಯವನ್ನು ಹೊಂದಿದ್ದೇವೆಯೇ? ನೀತಿವುಳ್ಳದನ್ನು ನಾವು ಹೇಗೆ ಅರಿಯಬಹುದು? ದೃಢವಾದದ್ದನ್ನು ಅರಿಯಲು ಸಾಧ್ಯವೇ? ಎಂದು ಅವರು ಯೋಚಿಸಿರಬಹುದು. ಅವರು ಕೇಳಿದಂತ ಸಂಗತಿಗಳು ದೇವರಿಂದ ಬಂದ ಯೇಸುವಿನ ಕುರಿತಾದ ಅಂಶಗಳೇ ಎಂಬ ಸಂದೇಹವು ಅವರಲ್ಲಿತ್ತು. ಅವರು ಪರಲೋಕಕ್ಕೆ ಹೋಗಲು ತವಕಿಸಿದರು. ಇವರ ಈ ಪ್ರಶ್ನೆಗಳಿಗೆ ಪ್ರತ್ಯುತ್ತರವಾಗಿ ಯೋಹಾನನು ಈ ಪತ್ರಿಕೆಯನ್ನು ಬರೆದನು.

### ಪ್ರಚಲಿತ ಸಮಸ್ಯೆಗಳು

ಆ ದಿನಗಳಲ್ಲಿದ್ದ ವಿಶ್ವಾಸಿಗಳಿಗೆ, ಸುಳ್ಳು ಬೋಧಕರುಗಳು ಸಂದೇಹ ಬರುವಂತೆ ಮಾಡಿದಂತೆ, ಈಗಿನ ಕ್ರೈಸ್ತರಿಗೂ ಅಂತಹ ಸಮಸ್ಯೆಗಳು ಬರುವ ಸಾಧ್ಯತೆಗಳಿವೆ. ನಂಬದೆ

ಇರುವ, ವಿಜ್ಞಾನ ಹಾಗೂ ಕಾರಣಗಳನ್ನು ನೀಡುವ ಪ್ರಪಂಚದ ಮಧ್ಯದಲ್ಲಿ ನಾವುಗಳು ಜೀವಿಸುತ್ತಿದ್ದೇವೆ. ಕೆಲವು ಸಾರಿ ವಿದ್ಯಾವಂತರು ಎನ್ನಿಸಿಕೊಂಡವರು ಸಹ ಯೇಸುವನ್ನಾಗಲೀ ಅಥವಾ ದೇವರನ್ನಾಗಲೀ ನಂಬುವದು ಅಸಾಧ್ಯ ಎಂದು ಹೇಳಬಹುದು ಅಂಥವರು ತಮ್ಮನ್ನು ಜ್ಞಾನಗಳೆಂದು ಕರೆದುಕೊಳ್ಳುತ್ತಾರೆ. ಆದ್ದರಿಂದ, "ನಾವು ನಂಬಿರುವಂಥ ಸಂಗತಿಗಳು ಸತ್ಯ ವಾದವುಗಳೇ ಎಂಬ ಸಂಶಯವು ನಮ್ಮಲ್ಲಿರುತ್ತದೆ?"

ನಿತ್ಯಜೀವವನ್ನು ಪಡೆಯಬಹುದೇ? ಹೌದು ಒಬ್ಬ ಕ್ರೈಸ್ತನು ಕೃಪೆಯಿಂದ ಬಿದ್ದು ಹೋದಾಗ, ನಿತ್ಯಜೀವವನ್ನು ಕಳೆದುಕೊಳ್ಳುತ್ತಾನೆ ಎಂದು ನಾವುಗಳು ಬೋಧಿಸಿರುವದು ಸತ್ಯವಾಗಿದೆ ಎಂದು ಹೇಳಲೂ ಬಹುದು,[2] ಹೌದು ಅನೇಕ ಕ್ರೈಸ್ತರು ತಾವು ಹೊಂದಿರುವ ನಿತ್ಯಜೀವದ ಕುರಿತು ಸಂದೇಹ ಹೊಂದಿದ್ದಾರೆ, ಅಂಥವರಿಗೆ ಯೋಹಾನನು, "ನಿಮಗೆ ನಿತ್ಯ *ಜೀವವಿದೆ*" ಎಂದು ಬರೆದಿರುವದು (ಒತ್ತಿ ಹೇಳಿದ್ದು ನನ್ನದು). "ಸತ್ಯವಾಗಿದೆಯೇ? ಎಂದು ನಾವು ಆಶ್ಚರ್ಯಪಡಬಹುದು?"

## ಪರಿಹಾರ

ಹಾಗಾದರೆ, ಆ ನಿಶ್ಚಯದ ಸಮಸ್ಯೆಗೆ ಪರಿಹಾರವೇನು? ಅದೇ ಪರಿಹಾರವು ನಮ್ಮ ಅನಿಶ್ಚಯದ ಸಮಸ್ಯೆಯನ್ನು ಪರಿಹರಿಸುತ್ತದೆ.

### ನೀವು ಸಹ ಅರಿಯಬಹುದಾಗಿದೆ

*ಆಗಿನ ಕಾಲದ ಪರಿಹಾರ.* ಅವರು ಕೇವಲ ಸತ್ಯವೆಂದು ಭ್ರಮಿಸದೆ ಅದು ಸತ್ಯವೆಂದು ನಂಬಬಹುದಿತ್ತು, ಆ ನಿಶ್ಚಯತ್ವಗಳ ಬಗ್ಗೆ ನಾವುಗಳು ಅರಿಯಬಹುದಾಗಿದೆ:

2:3-ನಾವು ಆತನನ್ನು ಬಲ್ಲವರಾಗಿದ್ದೇವೆ (ನೋಡಿರಿ 2:13, 14; 4:7, 8).

2:5-ಆತನಲ್ಲಿದ್ದೇವೆ ಎಂದು ತಿಳುಕೊಳ್ಳುತ್ತೇವೆ.

2:21; 4:2, 6-ನಾವು ಸತ್ಯವನ್ನು ಅರಿತ ಸತ್ಯ ಹಾಗೂ ಸುಳ್ಳನ್ನು ವಿವೇಚಿಸ ಬಹುದಾಗಿದೆ.

3:1-ನಾವು ದೇವರ ಮಕ್ಕಳೆಂದು ಅರಿಯುತ್ತೇವೆ.[3]

3:2-ಆತನ ಬರೋಣದಲ್ಲಿ ಆತನ ಹಾಗೆ ಆಗುವೆವು.

3:5-ಕ್ರಿಸ್ತನು ಪ್ರತ್ಯಕ್ಷನಾದನೆಂದು ಅರಿಯುತ್ತೇವೆ.

3:14-ಮರಣದಿಂದ ಪಾರಾಗಿ ಜೀವಕ್ಕೆ ಸೇರಿದ್ದೇವೆ.

3:16-ಕ್ರಿಸ್ತನು ನಮಗೋಸ್ಕರ ತನ್ನ ಪ್ರಾಣವನ್ನು ನೀಡಿದ್ದಾನೆ.

3:24-ತನ್ನ ಆತ್ಮವನ್ನು ನೀಡಿದ್ದಾನೆ (ಇದನ್ನು ಸಹ ನೋಡಿ 4:13.)

4:13-ತಂದೆಯು ನಮ್ಮಲ್ಲಿ ನೆಲೆಗೊಂಡಿದ್ದಾನೆ (ಇದನ್ನು ಸಹ ನೋಡಿ 5:19.)

4:16-ದೇವರ ಪ್ರೀತಿಯನ್ನು ಅರಿತ್ತಿದ್ದೇವೆ.

5:13-ನಿತ್ಯ ಜೀವ ಪಾಲಿಸಿದ್ದಾನೆ.

5:14, 15-ನಮ್ಮ ಪ್ರಾರ್ಥನೆ ಕೇಳಿದ್ದಾನೆ.

5:20-ದೇವರ ಮಗನು ಬಂದು ಪವಿತ್ರಾತ್ಮವನ್ನು ನೀಡಿದ್ದಾನೆ ಎಂದು ಅರಿಯಬಹುದಾಗಿದೆ.

ತನ್ನ ಓದುಗರನ್ನು ಕ್ರಿಸ್ತ ವಿರೋಧಿಯು, ಹಾಗೂ ಸುಳ್ಳು ಪ್ರವಾದಿಗಳು ನಾಶಮಾಡಲು ಸಾಧ್ಯವಿಲ್ಲ ಎಂದು ಯೋಹಾನನು ಒತ್ತಿ ಹೇಳಿದನು. ಆ ಸಹೋದರರು ಸತ್ಯವನ್ನು ಈಗಾಗಲೇ ಅರಿತ್ತಿದ್ದರಿಂದ, ಅವರಿಗೆ ಮತ್ತೊಬ್ಬರು ಬೋಧಿಸುವ ಅಗತ್ಯವಿರಲಿಲ್ಲ (1 ಯೋಹಾನ 2:20, 27). ಆದ್ದರಿಂದ, ಆಥಿಯಲ್ಲಿದ್ದ ಗ್ನಾಸಿಸ್ಟರು ಮಾತ್ರ ಎಲ್ಲವನ್ನು ಅರಿತವರಾಗಿರಲಿಲ್ಲ ಯಾಕೆಂದರೆ

ಯೋಹಾನನು ಕ್ರೈಸ್ತರೊಂದಿಗೆ ಮಾತನಾಡುತ್ತಿದ್ದನು. ಎಲ್ಲವನ್ನು ಅರಿತ್ತಿದ್ದೇವೆ ಎಂದು ಹೇಳುವವರಿಗಿಂತಲೂ, ಆದಿ ಕ್ರೈಸ್ತರು ಹೆಚ್ಚಾಗಿ ಅರಿತಿದ್ದರು. ಅವರು ಸತ್ಯವನ್ನು ಅರಿತ್ತಿದ್ದರಿಂದ, “ನಾವು ಅರಿತಿರುವ ಸತ್ಯವನ್ನು ನಂಬುತ್ತೇವೆ ಎಂದು ಹೇಳಿದರು - ಮತ್ತು ನಮಗೆ ನಿಮ್ಮ ಅಗತ್ಯವು ಇಲ್ಲದೆ ಇರುವದರಿಂದ, ನಮ್ಮಿಂದ ತೊಲಗಿ ಹೋಗಿ ಎಂದು ಹೇಳಿದರು!”

ಯೋಹಾನನ ಓದುಗರು ಎದುರಿಸಿದ ಸಮಸ್ಯೆಗಳನ್ನೇ ನಾವುಗಳು ಎದುರಿಸದೆ ಇರಬಹುದು. ಯೇಸು ಮಾನವನಾಗಿ ಬಂದನು ಎಂದು ನಂಬಿದವರು ನಮ್ಮ ಸಭೆಗಳಲ್ಲಿ ಮಾತನಾಡಬಹುದಾಗಿದೆ. ಅದಾಗ್ಯೂ ನಮಗೆಲ್ಲರಿಗೂ ಈ ವಿಚಾರದ ಅಗತ್ಯವಿದೆ. ಈ ಹಿಂದೆ ಯಾರೂ ಅರಿಯದಂತಹ ಆಳವಾದ ಸತ್ಯದ ಪ್ರಕಟನೆಯನ್ನು ಹೊಂದಿದ್ದೇವೆ ಎಂದು ಕೆಲವರು ಭಾವಿಸುತ್ತಾರೆ. ಒಂದು ವೇಳೆ ಈ ಸಂಗತಿಯು ನಮ್ಮಲ್ಲಿ ನಡೆಯುವದಾದರೆ, ನಾವು ಈಗಾಗಲೇ ಹೊಂದಿದ ಸತ್ಯದ ಕುರಿತು ಯೋಚಿಸಬೇಕು. ದೇವರ ಪ್ರಕಟನೆಯಿಂದ ದೊರೆತ ಸತ್ಯದ ಪ್ರಕಟನೆಗಳು ಸ್ಥಿರವಾಗಿರುತ್ತವೆ. ಯಾವುದೇ ಪ್ರಸಂಗಿಯು ಬೋಧಿಸುವಾಗ, ಅದು ಎರಡು ಸಾವಿರ ವರ್ಷಗಳ ಹಿಂದೆ ಪ್ರಕಟಸಿದ ಸತ್ಯಕ್ಕೆ ಹೊಂದುತ್ತದೆಯೇ ಎಂದು ಗಮನಿಸಬೇಕು, ವಿಶೇಷ ಜ್ಞಾನ ಹೊಂದಿದ್ದೇವೆ ಎಂದು ಹೇಳುವ ಬೋಧಕರ ಆಲೋಚನೆಗಳಿಗೆ ಒಳಗಾಗಬಾರದು.

*ಪ್ರಚಲಿತವಾಗಿರುವ ಪರಿಹಾರ.* 1 ಯೋಹಾನ 5:13ರಲ್ಲಿರುವ ವಿಚಾರವು ಕ್ರೈಸ್ತರಿಗೆ ಅಡ್ಡಿಯಾಗಿರಬಹುದು: “ದೇವರ ಮಗನ ಹೆಸರಿನಲ್ಲಿ ನಂಬಿಕೆ ಇಟ್ಟಿರುವವರಾದ ನಿಮ್ಮಲ್ಲಿ ನಿತ್ಯಜೀವ ಉಂಟೆಂದು ನಿಮಗೆ ಗೊತ್ತಾಗುವಂತೆ” ಈ ಮಾತುಗಳನ್ನು ಬರೆದಿದ್ದೇನೆ?

ಅಧರ್ಮ ಅಸಾಧ್ಯ ಎಂಬುವವರು ಈ ಮಾತುಗಳನ್ನು ಅಪಾರ್ಥಮಾಡಿ ಕೊಂಡಿರುವರು. ಈಗ ನಾವು ಹೊಂದಿರುವ ನಿತ್ಯ ಜೀವದ ಕುರಿತು ಯೋಹಾನನು ಬರೆದನು ಎಂಬ ಪ್ರತೀತಿ ಇದೆ. ನಾವು ಆ ಜೀವವನ್ನು ಈಗ ಹೊಂದಿದ್ದರೆ, ಅದನ್ನು ಹೇಗೆ ಕಳೆದುಕೊಳ್ಳಬಹುದು?

ಇನ್ನು ಕೆಲವರು, ಈ ವಾಕ್ಯಭಾಗದ ಸತ್ಯವನ್ನು ಅಲ್ಲಗಳೆಯುತ್ತಾರೆ. ಈಗ ನಿತ್ಯ ಜೀವ ಹೊಂದಿದ್ದೇವೆ ಎಂದು, ನಾವುಗಳು ಈಗ ಅರಿಯಲು ಸಾಧ್ಯವಿಲ್ಲ ಎಂದು ಹೇಳುತ್ತಾರೆ. ಈ ವಿಚಾರದ ಪ್ರಕಾರ, ನಾವು ರಕ್ಷಣೆಯನ್ನು ಕಳಕೊಳ್ಳುವ ಸಾಧ್ಯತೆಯಿರುವದರಿಂದ, ಪರಲೋಕದಲ್ಲಿ ನಮಗೆ ದೊರೆಯ ಬಹುದಾದ ಮನೆಯ ಕುರಿತು ಸಂಶಯವಿದೆ. ಆದರೆ “ಭಲೇ ನಂಬಿಗಸ್ತನಾದ ಒಳ್ಳೇ ಆಳು” ಎಂಬ ಮಾತನ್ನು ನಾವುಗಳು ಕೇಳುವವರೆಗೆ ಪರಲೋಕದ ವಿಷಯವಾಗಿ ವಿಚಲಿತರಾಗತ್ತವೆ. ನಾವು ಪಾಪಗಳನ್ನು ಮಾಡುತ್ತಾ ಇರುವದರಿಂದ, ಅನಿಶ್ಚಯತೆಯ ಕಾರಣ ಅವರು ನಂಬಿಗಸ್ತರಾದ ಕ್ರೈಸ್ತರಾಗಿ ಬದುಕಲು ಪ್ರಯತ್ನಿಸುತ್ತಾರೆ. ಪಾಪದ ಅರಿಕೆ ಮಾಡದೆ ಹೋದರೆ ನರಕಕ್ಕೆ ಹೋಗುತ್ತಾರೆ ಎಂದು ತಿಳಿಯುತ್ತಾರೆ!

ಈ ಯಾವುದೇ ತರ್ಜುಮೆಯು ಸರಿಯಾಗಿರುವದಿಲ್ಲ.

ನಾವು ನಮ್ಮ ರಕ್ಷಣೆಯನ್ನು ಕಳಕೊಳ್ಳುತ್ತೇವೆ ಎಂಬ ತತ್ವವನ್ನು ಹೊಸ ಒಡಂಬಡಿಕೆಯು ತಿಳಿಸುವದಿಲ್ಲ. ಕ್ರಿಸ್ತನಿಗೆ ಸಂಬಂಧ ಪಟ್ಟ ಗುಣಾತ್ಮಕವಾದ ನಿತ್ಯಜೀವದ ಬಗ್ಗೆ ಇಲ್ಲಿ ಬರೆಯಲಾಗಿದೆ. ಅದು ಕ್ರಿಸ್ತನಲ್ಲಿರುವ ಜೀವ, ನಂತರ ನಾವು ಸಾಯುವಾಗ, ಅದು ಮುಂದುವರೆಯುತ್ತದೆ.[4] ಒಂದು ವೇಳೆ ಕ್ರಿಸ್ತನನ್ನು ನಾವು ತೊರೆಯುವದಾದರೆ, ಆ ಜೀವವು ನಮ್ಮಿಂದ ಹೊರಟುಹೋಗುತ್ತದೆ, ಅದನ್ನು ಪುನಃ ಪಡೆಯುವ ಸಾಧ್ಯತೆಯಿಲ್ಲ.

ನಾವು ಈ ಲೋಕದಲ್ಲಿ ಜೀವಿಸುತ್ತಿರುವಾಗ, ಈ ಲೋಕದ ಜನರಿಗಿಂತ ಕ್ರಿಸ್ತನಲ್ಲಿ ವಿಭಿನ್ನವಾದ ಜೀವಿತವನ್ನು ಜೀವಿಸುವ ಕ್ರೈಸ್ತರು ಎಂದು ತಿಳಿದುಕೊಳ್ಳಬೇಕು. ಜೀವಿತ ಕಾಲವು ಮುಗಿದ ನಂತರವೂ ಆ ಜೀವವು ನಮ್ಮಲ್ಲಿ ಮುಂದುವರೆಯುತ್ತದೆ. ನಾವು ಕೃಪೆಯಿಂದ ರಕ್ಷಿಸಲ್ಪಟ್ಟಿರುವೆವೋ ಅಥವಾ ಇಲ್ಲವೋ ಎಂದು ಪರಿಶೀಲಿಸಿಕೊಂಡು ನಿದ್ರಿಸುವಂತಹ ಪ್ರಮೆಯವಿರುವದಿಲ್ಲ. ನಾವು ಈ ದಿನ ಸತ್ತರೆ ಪರಲೋಕಕ್ಕೆ ಹೋಗುವ ವಿಚಾರದಲ್ಲಿ ಸಂದೇಹಪಡುವ ಅಗತ್ಯವಿಲ್ಲ. ನಮಗೆ ರಕ್ಷಣೆಯಾಗಿದೆ, ರಕ್ಷಿಸಲ್ಪಡುತ್ತಿದ್ದೇವೆ,

ಪೂರ್ಣ ರಕ್ಷಿಸಲ್ಪಡುತ್ತೇವೆ! 1 ಯೋಹಾನ 5:13 ರಲ್ಲಿ: "ದೇವರ ಮಗನ ಹೆಸರಿನಲ್ಲಿ ನಂಬಿಕೆಯಿಟ್ಟಿರುವವರಾದ ನಿಮ್ಮಲ್ಲಿ ನಿತ್ಯಜೀವ ಉಂಟೆಂದು ನಿಮಗೆ ಗೊತ್ತಾಗುವಂತೆ ಈ ಮಾತುಗಳನ್ನು ಬರೆದಿದ್ದೇನೆ."

**ಇದನ್ನು ಯಾರು ಗ್ರಹಿಸಬಹುದು?**

ಹೇಗೂ ಒಂದು ಅಧಿಕವಾದ ಸಂಗತಿಯನ್ನು ತಿಳಿಯಲೇಬೇಕು "... ನಿಮಗೆ ನಿತ್ಯ ಜೀವವಿದೆ" ಇಲ್ಲಿ "ನಿಮಗೆ" ಎಂದರೆ, ಯಾರಿಗೆ? ಯಾವಾಕೇಯು, ಯಾವಾತನು ನಿತ್ಯ ಜೀವವನ್ನು ಪಡೆಯಬಹುದು? ಈ ಪ್ರಶ್ನೆಗೆ ಉತ್ತರವನ್ನು 1 ಯೋಹಾನ 5 ರಲ್ಲಿ ಪಡೆಯುತ್ತೇವೆ. ಆತನಲ್ಲಿರುವ ಆಶೀರ್ವಾದಗಳನ್ನು ಹೊಂದಿ, ಆತನಲ್ಲಿ ಅವರು ಹೇಗೆ ಜೀವಿಸಬೇಕೆಂಬದನ್ನು ಅವರು ಅರಿಯಬೇಕೆಂದು ಯೋಹಾನನು ಬಯಸಿದನು. ನಿತ್ಯ ಜೀವದ ಭರವಸೆ ಹೊಂದಿರುವವರ ಕುರಿತು ಯೋಹಾನ 5ರಲ್ಲಿ ತಿಳಿಸಲಾಗಿದೆ.

> ಯೇಸುವು ಕ್ರಿಸ್ತನೆಂದು ನಂಬುವ ಪ್ರತಿಯೊಬ್ಬನು ದೇವರಿಂದ ಹುಟ್ಟಿದವನಾಗಿದ್ದಾನೆ. ಯಾವನು ಹುಟ್ಟಿಸಿದ ತಂದೆಯನ್ನು ಪ್ರೀತಿಸುತ್ತಾನೋ ಅವನು ತಂದೆಯಿಂದ ಹುಟ್ಟಿದವರೆಲ್ಲರನ್ನೂ ಪ್ರೀತಿಸುತ್ತಾನೆ. ನಾವು ದೇವರ ಮಕ್ಕಳನ್ನು ಪ್ರೀತಿ ಸುತ್ತೇವೆಂಬದನ್ನು ದೇವರನ್ನು ಪ್ರೀತಿಸಿ ಆತನ ಆಜ್ಞೆಗಳನ್ನು ಅನುಸರಿಸುವದರಿಂದಲೇ ತಿಳಿದುಕೊಳ್ಳುತ್ತೇವೆ. ದೇವರ ಮೇಲಣ ಪ್ರೀತಿ ಏನಂದರೆ ಆತನ ಆಜ್ಞೆಗಳನ್ನು ಕೈಕೊಂಡು ನಡೆಯುವದೇ. ಆತನ ಆಜ್ಞೆಗಳು ಭಾರವಾದವುಗಳಲ್ಲ. ಯಾಕಂದರೆ ದೇವರಿಂದ ಹುಟ್ಟಿರುವಂಥದೆಲ್ಲವು ಲೋಕವನ್ನು ಜಯಿಸುತ್ತದೆ. ಲೋಕವನ್ನು ಜಯಿಸಿದಂಥದು ನಮ್ಮ ನಂಬಿಕೆಯೇ. ಯೇಸುವು ದೇವರ ಮಗನೆಂದು ನಂಬಿದವರೇ ಅಲ್ಲದೆ ಲೋಕವನ್ನು ಜಯಿಸುವವರು ಇನ್ನಾರಿದ್ದಾರೇ?
>
> ಈತನು, ಅಂದರೆ ಯೇಸು ಕ್ರಿಸ್ತನು, ನೀರಿನಿಂದಲೂ ರಕ್ತದಿಂದಲೂ ಸಾಕ್ಷಿಹೊಂದಿದವನು. ನೀರಿನಿಂದ ಮಾತ್ರವಲ್ಲ, ನೀರಿನಿಂದಲೂ ರಕ್ತದಿಂದಲೂ ಸಾಕ್ಷಿ ಹೊಂದಿದವನಾಗಿದ್ದಾನೆ. ಇದಲ್ಲದೆ ಆತ್ಮನು ಸಾಕ್ಷಿ ಕೊಡುವವನಾಗಿದ್ದಾನೆ; ಆತ್ಮನು ಸತ್ಯಸ್ವರೂಪನೇ. ಆತ್ಮ ನೀರು ರಕ್ತ ಎಂಬ ಮೂರು ಸಾಕ್ಷಿಗಳುಂಟು; ಈ ಮೂರು ಒಂದೇ ಅಭಿಪ್ರಾಯವಾಗಿ ಸಾಕ್ಷಿ ಹೇಳುತ್ತವೆ. ನಾವು ಮನುಷ್ಯರ ಸಾಕ್ಷಿಯನ್ನು ತೆಗೆದುಕೊಳ್ಳು ತ್ತೇವಲ್ಲಾ; ದೇವರ ಸಾಕ್ಷಿಯು ಅದಕ್ಕಿಂತ ವಿಶೇಷವಾಗಿದೆ. ದೇವರು ಕೊಟ್ಟ ಸಾಕ್ಷಿ ಏನಂದರೆ ಆತನು ತನ್ನಮಗನ ವಿಷಯದಲ್ಲಿ ಹೇಳಿದ್ದೇ. ದೇವರ ಮಗನಲ್ಲಿ ನಂಬಿಕೆ ಇಟ್ಟವನು ಆ ಸಾಕ್ಷಿಯನ್ನು ತನ್ನಲ್ಲೇ ಹೊಂದಿದ್ದಾನೆ. ದೇವರನ್ನುನಂಬದವನು ಆತನನ್ನು ಸುಳ್ಳುಗಾರನನ್ನಾಗಿ ಮಾಡಿದ್ದಾನೆ; ಹೇಗಂದರೆ ದೇವರು ತನ್ನಮಗನ ವಿಷಯವಾಗಿ ಹೇಳಿರುವ ಸಾಕ್ಷಿಯಲ್ಲಿ ಅವನು ನಂಬಿಕೆಯಿಡಲಿಲ್ಲ. ಆ ಸಾಕ್ಷಿ ಯಾವದಂದರೆ ದೇವರು ನಮಗೆ ನಿತ್ಯ ಜೀವವನ್ನು ಅನುಗ್ರಹಿಸಿದನು, ಆ ಜೀವವು ಆತನ ಮಗನಲ್ಲಿ ಅದೆ ಎಂಬದೇ. ಯಾವನು ದೇವರ ಮಗನನ್ನು ಅಂಗೀಕರಿಸಿದ್ದಾನೋ ಅವನಿಗೆ ಆ ಜೀವ ಉಂಟು; ಯಾವನು ದೇವರ ಮಗನನ್ನು ಅಂಗೀಕರಿಸಲಿಲ್ಲವೋ ಅವನಿಗೆ ಆ ಜೀವವಿಲ್ಲ.
>
> ದೇವರ ಮಗನ ಹೆಸರಿನಲ್ಲಿ ನಂಬಿಕೆಯಿಟ್ಟಿರುವವರಾದ ನಿಮ್ಮಲ್ಲಿ ನಿತ್ಯಜೀವ ಉಂಟೆಂದು ನಿಮಗೆ ಗೊತ್ತಾಗುವಂತೆ ಈ ಮಾತುಗಳನ್ನು ಬರೆದಿದ್ದೇನೆ. ಮತ್ತು ನಾವು ದೇವರ ಚಿತ್ತಾನುಸಾರವಾಗಿ ಏನಾದರೂ ಬೇಡಿಕೊಂಡರೆ ಆತನು ನಮ್ಮ ವಿಜ್ಞಾಪನೆಯನ್ನು ಕೇಳುತ್ತಾನೆಂಬ ಧೈರ್ಯವು ಆತನ ವಿಷಯವಾಗಿ ನಮಗುಂಟು. ನಾವು ಏನು ಬೇಡಿಕೊಂಡರೂ ಆತನು ನಮ್ಮ ವಿಜ್ಞಾಪನೆಯನ್ನು ಕೇಳುತ್ತಾನೆಂಬದು ನಮಗೆ ಗೊತ್ತಾಗಿದ್ದರೆ ನಾವು ಬೇಡಿದವುಗಳು ಆತನಿಂದ ನಮಗೆ ದೊರೆತವೆಂಬದೂ ನಮಗೆ ಗೊತ್ತಾಗಿದೆ. ಯಾವನಾದರೂ ತನ್ನ ಸಹೋದರನು ಮರಣಕರವಲ್ಲದ

ಪಾಪಮಾಡುವದನ್ನು ಕಂಡರೆ ಅವನು ದೇವರನ್ನು ಬೇಡಿಕೊಳ್ಳಲಿ; ಆಗ ದೇವರು ಮರಣಕರವಲ್ಲದ ಪಾಪಮಾಡುವವರಿಗೆ ಜೀವವನ್ನು ದಯಪಾಲಿಸುವನು ಮರಣಕರವಾದ ಪಾಪವುಂಟು; ಈ ಪಾಪದ ವಿಷಯವಾಗಿ ಬೇಡಿಕೊಳ್ಳಬೇಕೆಂದು ನಾನು ಹೇಳುವದಿಲ್ಲ. ನೀತಿಗೆ ವಿರುದ್ಧವಾದದ್ದೆಲ್ಲಾ ಪಾಪವಾಗಿದೆ; ಆದರೂ ಮರಣಕರವಲ್ಲದ ಪಾಪವುಂಟು. ದೇವರಿಂದ ಹುಟ್ಟಿರುವವನು ಪಾಪಮಾಡುವವನಲ್ಲವೆಂಬದು ನಮಗೆ ಗೊತ್ತದೆ. ದೇವರಿಂದ ಹುಟ್ಟಿದಾತನು ಅವನನ್ನು ಕಾಪಾಡುವನು; ಕೆಡುಕನು ಅವನನ್ನು ಹಿಡಿಯುವದಿಲ್ಲ. ನಾವು ದೇವರಿಂದ ಹುಟ್ಟಿದವರೆಂದೂ ಲೋಕವೆಲ್ಲವೂ ಕೆಡುಕನ ವಶದಲ್ಲಿ ಬಿದ್ದಿದೆ ಎಂದೂ ನಮಗೆ ಗೊತ್ತದೆ. ದೇವರ ಮಗನು ಬಂದು ನಾವು ಸತ್ಯವಾಗಿರುವಾತನನ್ನು ಅರಿತುಕೊಳ್ಳುವ ಹಾಗೆ ನಮಗೆ ವಿವೇಕವನ್ನು ಕೊಟ್ಟಿದ್ದಾನೆಂಬದು ನಮಗೆ ಗೊತ್ತದೆ. ಮತ್ತು ನಾವು ದೇವರ ಮಗನಾದ ಯೇಸು ಕ್ರಿಸ್ತನಲ್ಲಿ ಇರುವವರಾಗಿ ಸತ್ಯವಾಗಿರುವಾತನಲ್ಲಿದ್ದೇವೆ. ಆತನು ಸತ್ಯದೇವರೂ ನಿತ್ಯಜೀವವೂ ಆಗಿದ್ದಾನೆ.

ಪ್ರಿಯರಾದ ಮಕ್ಕಳೇ, ವಿಗ್ರಹಗಳಿಗೆ ದೂರವಾಗಿರುವಂತೆ ನಿಮ್ಮನ್ನು ಕಾಪಾಡಿಕೊಳ್ಳಿರಿ.

ಯೇಸುವಿನ ದೈವತ್ವದ ಸಾಕ್ಷಿಗಾಗಿ, ಈ ವಾಕ್ಯಭಾಗ (ವಚನಗಳು 6-11)ವನ್ನು ಬರೆಯಲಾಗಿದೆ. ಪ್ರಾರ್ಥನೆಗೆ ಉತ್ತರ ನೀಡುವ ವಾಗ್ದಾನದ ವಾಕ್ಯವನ್ನು ಸಹ ನೀಡಲಾಗಿದೆ (ವಚನಗಳು 14-17). ಮುಖ್ಯಾಂಶಗಳನ್ನು ಸಹ ನೀಡಿದೆ (ವಚನಗಳು 18-21). ಭರವಸೆ ಹೊಂದಿರುವವರು[5] ಯಾರು ಎಂಬುದನ್ನು ಸಹ ಈ ಅಧ್ಯಾಯದಲ್ಲಿ ತಿಳಿಸಲಾಗಿದೆ.

(1) *"ದೇವರಿಂದ ಹುಟ್ಟಿದವರು" ನಿತ್ಯ ಜೀವದ ಭರವಸೆಯನ್ನು ಹೊಂದಿದ್ದಾರೆ* (5:1, 4). ಹೊಸದಾಗಿ ಹುಟ್ಟಿದ ವಿಶ್ವಾಸಿಗಳಾದ ಕ್ರೈಸ್ತರಿಗೆ ಈ ಪತ್ರಿಕೆಯನ್ನು ಬರೆಯಲಾಗಿದೆ. ಹೊಸದಾಗಿ ಹುಟ್ಟದವರಿಗೆ ನಿರೀಕ್ಷೆ ಇರುವದಿಲ್ಲ.

(2) *ಯೇಸುವೇ ಕ್ರಿಸ್ತನೆಂದು ದೇವರೆಂದು ಅರಿಕೆ ಮಾಡುವವರಿಗೆ ನಿರೀಕ್ಷೆ ಇದೆ* (1 ಯೋಹಾನ 5:1), *ದೇವರ ಮಗನು* (1 ಯೋಹಾನ 5:5, 9, 10, 11, 12, 13,[6] 20).[7] ಸುಳ್ಳು ಪ್ರವಾದಿಗಳನ್ನು ನಂಬಿದವರಿಗೆ ಇಂತಹ ನಿರೀಕ್ಷೆ ಇಲ್ಲ ಎಂದು ಈ ಪತ್ರಿಕೆ ತಿಳಿಸುತ್ತದೆ.

(3) *ದೇವರನ್ನು ಪ್ರೀತಿಸುವವರು ಆ ನಿರೀಕ್ಷೆಯನ್ನು ಹೊಂದಿದ್ದಾರೆ. ನಮಗೆ ಕಾಣುವವರನ್ನು ಪ್ರೀತಿಸದೆ ಹೋದರೆ, ನಾವು ದೇವರನ್ನು ಪ್ರೀತಿಸುತ್ತೇವೆ ಎಂದು ಹೇಳಲು ಅಸಾಧ್ಯ* (5:2, 3). ಕ್ರೈಸ್ತರು ದೇವರನ್ನು ದೇವರ ಮಕ್ಕಳನ್ನು ಹಾಗೂ ಆತನ ಕಟ್ಟಳೆಗಳನ್ನು ಪ್ರೀತಿಸಬೇಕು. ಆತನನ್ನು ಆತನ ಜನರನ್ನು ಪ್ರೀತಿಸದವರು ನಿತ್ಯ ಜೀವದ ನಿರೀಕ್ಷೆಯನ್ನು ಹೊಂದಲಾರರು.

(4) *ದೇವರ ಮಕ್ಕಳನ್ನು ಪ್ರೀತಿಸುವವನು ನಿತ್ಯ ಜೀವದಲ್ಲಿ ಭರವಸೆವುಳ್ಳ ವನಾಗಿರುತ್ತಾನೆ* (5:1). ಕಣ್ಣಿಗೆ ಕಾಣುವ ದೇವರ ಮಕ್ಕಳನ್ನು ನಾವು ಪ್ರೀತಿಸದೆ ಹೋದರೆ, ಕಣ್ಣಿಗೆ ಕಾಣದಿರುವ ದೇವರನ್ನು ಪ್ರೀತಿಸಲು ಸಾಧ್ಯವಿಲ್ಲ (1 ಯೋಹಾನ 4:20). "ಕ್ರಿಯೆ ಹಾಗೂ ಸತ್ಯದಲ್ಲಿ" ನಮ್ಮ ಸಹೋದರರನ್ನು ಪ್ರೀತಿಸುವದಾದರೆ, ನಿರೀಕ್ಷೆ ಹೊಂದಿದವರಾಗುತ್ತೇವೆ (1 ಯೋಹಾನ 3:18, 19). ಒಂದು ವೇಳೆ ನಮ್ಮ ಮನಸ್ಸು ನಮ್ಮನ್ನು ಹಂಗಿಸುವದಾದರೂ, ನಾನು ಅಧೈರ್ಯಗೊಂಡರೂ, ರಕ್ಷಣೆಯ ಕುರಿತು ಸಂಶಯವಾದರೂ - ದೇವರು ನಮ್ಮ ಹೃದಯಗಳಿಗಿಂತಲೂ ದೊಡ್ಡವನೇ ಎಂದು ತಿಳಿಯಬೇಕು (3:20). ಅಧೈರ್ಯ ಹಾಗೂ ತಿರಸ್ಕಾರ ನಿಮಿತ್ತ ನಿರೀಕ್ಷೆಯನ್ನು ಕಳಕೊಳ್ಳುವದಿಲ್ಲ. ಸಂಶಯದ ನಡುವೆಯೂ ನಾವು ರಕ್ಷಿಸಲ್ಪಡುತ್ತೇವೆ.

(5) *ದೇವರ ಕಟ್ಟಳೆಗಳನ್ನು ಪಾಲಿಸುವವರು ನಿರೀಕ್ಷೆ ಹೊಂದಿರುತ್ತಾರೆ* (1 ಯೋಹಾನ

5:2, 3). ಆತನ ಕಟ್ಟಳೆಗಳನ್ನು ಪಾಲಿಸದೆ ಇರುವಾಗ, ನಾವು ದೇವರನ್ನು ಪ್ರೀತಿಸುತ್ತೇವೆ ಎಂದು ಹೇಳಲಾಗದು (ಯೋಹಾನ 14:15). "ಆತನ ಆಜ್ಞೆಗಳು ಭಾರ ವಾದವುಗಳಲ್ಲ" ಎಂದು ಯೋಹಾನನು ಧೈರ್ಯಪಡಿಸಿದ್ದಾನೆ (5:3ಬಿ). ನಮಗೆ ಕಷ್ಟ ವಾದವುಗಳನ್ನು ನಾವು ಮಾಡಬೇಕೆಂದು ದೇವರು ಬಯಸುವದಿಲ್ಲ ನಾವು ನಮ್ಮನ್ನು ಪೂರ್ಣವಾಗಿ ದೇವರಿಗೆ ಸಮರ್ಪಿಸಿಕೊಂಡರೆ, ಆತನ "ಆಜ್ಞೆಗಳು ಬಾರವಾಗಿರುವದಿಲ್ಲ ಉಲ್ಲಾಸಕರವಾಗಿರುತ್ತವೆ."

ಯಾವ ಆಜ್ಞೆಗಳನ್ನು ನಾವು ಅನುಸರಿಸಬೇಕು? ನಾವು ಕೇವಲ "ನಂಬಿಕೆಯಿಂದ ಮಾತ್ರ ರಕ್ಷಿಸಲ್ಪಡದೆ" ನಮ್ಮನ್ನು ರಕ್ಷಣೆಗೆ ಮುನ್ನಡೆಸುವ ನಂಬಿಕೆಯಿಂದ ರಕ್ಷಿಸಲ್ಪಡುತ್ತೇವೆ, ಆದ್ದರಿಂದ ನಮಗೆ ಸಂಬಂಧಪಟ್ಟ ಆಜ್ಞೆಗಳನ್ನು ಪಾಲಿಸಬೇಕು.

(6) *ಪಾಪದಲ್ಲಿ ಮುಂದುವರೆಯುವವರು ನಿರೀಕ್ಷೆವುಳ್ಳವರಾಗಿದ್ದಾರೆ* (5:18). ಕ್ರೈಸ್ತರು ಪಾಪ ಮಾಡುವದೇ ಇಲ್ಲ ಎಂದು ಯೋಹಾನನು ಹೇಳಿರುವದಿಲ್ಲ (1 ಯೋಹಾನ 1:7-10). ಕ್ರೈಸ್ತರು ಪಾಪದಲ್ಲಿ ಮುಂದುವರೆಯಬಾರದು ಎಂದು ಹೇಳಿದ್ದಾನೆ. ಯಾಕೆಂದರೆ ಅವರು ದೇವರನ್ನು ಪ್ರೀತಿಸುತ್ತಾರೆ. ನಂಬಿಗಸ್ತರಾದ ಕ್ರೈಸ್ತರ ಜೀವಿತವು ನೀತಿವುಳ್ಳದ್ದಾಗಿರುತ್ತದೆ. ಆಕೆ ಅಥವಾ ಅವನು ಎಡವಿಬಿದ್ದರೂ, ಪಾಪದಲ್ಲಿ ಮುಂದುವರೆಯುವ ಅಭ್ಯಾಸ ಮಾಡುವದಿಲ್ಲ. ರಾಜಾರೋಷವಾಗಿ ಪಾಪದಲ್ಲಿ ಜೀವಿಸುತ್ತಿರುವವನು, ಅದರಲ್ಲಿ ಆನಂದಿಸುವದು ಅಸಾಧ್ಯ (1 ಯೋಹಾನ 5:13), ಅವನು ನಿರೀಕ್ಷೆ ಹೊಂದಿರುವವರ ಸಮೂಹಕ್ಕೆ ಸೇರಿದವನಲ್ಲ.

(7) *ಯಾರ ಪ್ರಾರ್ಥನೆಯು ಕೇಳಲ್ಪಡುತ್ತದೋ, ಅವನು ನಿರೀಕ್ಷೆವುಳ್ಳವನಾಗಿದ್ದಾನೆ.* ಈ ಹಿಂದೆ ಬರೆದಿರುವ ಸಂಗತಿಗಳಿಗಿಂತ, ಈ ಸಂಗತಿಯು ಭಿನ್ನವಾಗಿದೆ. ಆದಾಗ್ಯೂ ಯೋಹಾನನು ಇದನ್ನು 1 ಯೋಹಾನ 5ನೇ ಅಧ್ಯಾಯದಲ್ಲಿ ತಿಳಿಸಿರುವನು, ಅದು ಭರವಸವುಳ್ಳ ಸಂಗತಿಯಾಗಿದೆ:

> ಮತ್ತು ನಾವು ದೇವರ ಚಿತ್ತಾನುಸಾರವಾಗಿ ಏನಾದರೂ ಬೇಡಿಕೊಂಡರೆ ಆತನು ನಮ್ಮ ವಿಜ್ಞಾಪನೆಯನ್ನು ಕೇಳುತ್ತಾನೆಂಬ ಧೈರ್ಯವು ಆತನ ವಿಷಯವಾಗಿ ನಮಗುಂಟು. ನಾವು ಏನು ಬೇಡಿಕೊಂಡರೂ ಆತನು ನಮ್ಮ ವಿಜ್ಞಾಪನೆಯನ್ನು ಕೇಳುತ್ತಾನೆಂಬದು ನಮಗೆ ಗೊತ್ತಾಗಿದ್ದರೆ ನಾವು ಬೇಡಿದವುಗಳು ಆತನಿಂದ ನಮಗೆ ದೊರೆತವೆಂಬದೂ ನಮಗೆ ಗೊತ್ತಾಗಿದೆ (1 ಯೋಹಾನ 5:14, 15).

ದೇವರು ನಮ್ಮ ಪ್ರಾರ್ಥನೆಯನ್ನು ಕೇಳಿ ಉತ್ತರಿಸುತ್ತಾನೆ ಎಂದು ನಾವುಗಳು ನಂಬಬೇಕು. ಯೇಸು ಪ್ರಾರ್ಥಿಸಿದಂತೆ,[8] ನಾವು ಆತನ ಚಿತ್ತದಂತೆ ಯಾವಾಗಲು ಪ್ರಾರ್ಥಿಸಿದರೆ, ನಾವು ಕೇಳಿದ ಸಂಗತಿಗಳು ಈಡೇರುತ್ತವೆ (ಮತ್ತಾಯ 26:42; ನೋಡಿ 6:10).

ವಾಗ್ದಾನದ ಪ್ರಾರ್ಥನೆಗಳಿಗೆ ಉತ್ತರ ದೊರಕಿದಂತೆ, ಪಾಪ ಮಾಡಿದವರಿಗಾಗಿ ಮಾಡಬೇಕಾದ ಪ್ರಾರ್ಥನೆಯ ಕುರಿತು ಯೋಹಾನನು ಮಾತಾಡಿದನು. ಪಾಪ ಮಾಡಿದವರಿಗಾಗಿ ಮಾಡಿದ ಪ್ರಾರ್ಥನೆಯಲ್ಲಿ ನಿರೀಕ್ಷೆ ಇದೆ (1 ಯೋಹಾನ 5:16ಎ). ಹಾಗೂ ನಿಮ್ಮ ಪಾಪಗಳನ್ನು ಅರಿಕೆ ಮಾಡಿ, ಒಬ್ಬರಿಗೊಬ್ಬರು ಪ್ರಾರ್ಥಿಸಿರಿ (ಯಾಕೋಬ 5:16).

ಮರಣಕ್ಕೆ ನಡೆಸುವ ಪಾಪವನ್ನು ಮಾಡಿದವರಿಗಾಗಿ ಪ್ರಾರ್ಥಿಸುವ ಅಗತ್ಯವಿಲ್ಲ ಅಂದರೆ ಸಹೋದರ, ಸಹೋದರಿಯರು ತಾವು ಮಾಡಿದ ಪಾಪಕ್ಕಾಗಿ ಮಾನಸಾಂತರ ಪಡದ ಪಾಪ ವಾಗಿದೆ. ಅಂಥವರಿಗಾಗಿ ಪ್ರಾರ್ಥನೆ ಮಾಡಬೇಡಿರಿ ಎಂದು ಹೇಳದೆ, ಅಂತಹ ಪ್ರಾರ್ಥನೆಗೆ ಉತ್ತರವಿಲ್ಲ ಎಂಬ ಅರ್ಥವಾಗಿದೆ.

(8) *ವಿಗ್ರಹಗಳಿಂದ ದೂರವಿರುವವರು ನಿರೀಕ್ಷೆ ಹೊಂದಿರುತ್ತಾರೆ.* ಕಡೇಯ ವಚನದಲ್ಲಿ ವಿಗ್ರಹಗಳ ಕುರಿತು ಎಚ್ಚರಿಗೆ ನೀಡಲಾಗಿದೆ. (ವಿಗ್ರಹದ ಕುರಿತು ಈ ಹಿಂದೆ ಅವನು ತಿಳಿಸಿರುವದಿಲ್ಲ[9]) ಅವನು "ನಿಜ ದೇವರ" ಕುರಿತು ಮಾತಾಡಿದನು (1 ಯೋಹಾನ 5:21). "ಪ್ರಿಯರಾದ ಮಕ್ಕಳೇ, ವಿಗ್ರಹಗಳಿಗೆ ದೂರವಾಗಿರುವಂತೆ ನಿಮ್ಮನ್ನು ಕಾಪಾಡಿಕೊಳ್ಳಿರಿ,"

> ದೇವರ ಮಗನು ಬಂದು ನಾವು ಸತ್ಯವಾಗಿರುವಾತನನ್ನು ಅರಿತುಕೊಳ್ಳುವ ಹಾಗೆ ನಮಗೆ ವಿವೇಕವನ್ನು ಕೊಟ್ಟಿದ್ದಾನೆಂಬದು ನಮಗೆ ಗೊತ್ತದೆ. ಮತ್ತು ನಾವು ದೇವರ ಮಗನಾದ ಯೇಸು ಕ್ರಿಸ್ತನಲ್ಲಿ ಇರುವವರಾಗಿ ಸತ್ಯವಾಗಿರುವಾ ತನಲ್ಲಿದ್ದೇವೆ. ಆತನು ಸತ್ಯದೇವರೂ ನಿತ್ಯಜೀವವೂ ಆಗಿದ್ದಾನೆ (1 ಯೋಹಾನ 5:20).

ಸುಳ್ಳು ಬೋಧಕರ ಕುರಿತು ಅವನು ತಿಳಿಸಿದ್ದನು. ಯೇಸುವಿನ ಬದಲಾಗಿ ಪೂಜೆಗೊಳ್ಳುವ ವಿಗ್ರಹದ ಕುರಿತು ಈಗ ಹೇಳುತ್ತಿರುವನು. ವಿಗ್ರಹ ಆರಾಧನೆ ಎಂದರೆ "ನಿಜ ದೇವರ ನಿರ್ಲಕ್ಷ್ಯ"[10] - ಅದು ಅಂತಿಮವಾದ ಪಾಪ ಅದರ ಬಗ್ಗೆ ಎಚ್ಚರಿಸಿ ತನ್ನ ಪತ್ರಿಕೆಯನ್ನು ಅಂತ್ಯಗೊಳಿಸುತ್ತಿದ್ದಾನೆ.

ವಿಗ್ರಹದ ಕುರಿತ ಎಚ್ಚರಿಕೆಯು ನಮಗೂ ಅಗತ್ಯವಿದೆ. ಅದರ ಕುರಿತು ನಮ್ಮ ಮನಸ್ಸ ನಮ್ಮನ್ನು ಹಂಗಿಸಬಹುದು. ಯೇಸುವಿಗೆ ಪ್ರಥಮ ಸ್ಥಾನ ನೀಡದೆ ಇದ್ದಲ್ಲಿ, ನಾವು ವಿಗ್ರಹ ಆರಾಧಕರೇ ದೇವರ ಬದಲಾಗಿ ಇತರೆ ಸಂಗತಿಗಳಿಗೆ ಆದ್ಯತೆ ನೀಡುವದಾದರೆ, ಅಂದರೆ ನಮ್ಮ ವ್ಯವಹಾರ, ವಿದ್ಯಾಭ್ಯಾಸ, ಯಶಸ್ಸಿನ ಕಡೆಗೆ ದೇವರಿಗಿಂತಲೂ ಹೆಚ್ಚಿನದಾಗಿ ಪರಿಗಣಿಸುವದಾದರೆ ನಾವು ವಿಗ್ರಹ ಆರಾಧಕರೆ. ಒಬ್ಬರಿಗೆ ತನ್ನ ಕುಟುಂಬ, ಹವ್ಯಾಸ, ವ್ಯಾಪಾರ ಅಥವಾ ಕೆಲಸ ಹೆಚ್ಚಿನದಾದರೆ, ಅವನು ವಿಗ್ರಹ ಆರಾಧಕನೇ. ಒಬ್ಬನು ಪಾಪದಲ್ಲೇ ಬದುಕುತ್ತಾ ಸೈತಾನನ ಕಾರ್ಯಗಳನ್ನು ಮಾಡುವದಾದರೆ,[11] ಅವನು ವಿಗ್ರಹ ಆರಾಧಕನಾಗಿದ್ದಾನೆ. ಆದ್ದರಿಂದ ವಿಗ್ರಹ ಆರಾಧಕನು ನಿರೀಕ್ಷೆ ಕಳಕೊಂಡವನು ಎಂದು ಅರಿತುಕೊಳ್ಳಬೇಕು.

## ಮುಕ್ತಾಯ

ಈ ಸಂಗತಿಗಳನ್ನು ಅರಿಯದೆ ಇರುವಾಗ, ನಾವುಗಳು ಗೊಂದಲಕ್ಕೊಳಗಾಗಿದ್ದೆವು. ಯೋಹಾನ 1ರ ಪ್ರಕಾರ, ಕ್ರೈಸ್ತರಿಗೆ ಆ ಸಮಸ್ಯೆ ಇರುವದಿಲ್ಲ ಅದಕ್ಕಾಗಿ ದೇವರಿಗೆ ಸ್ತೋತ್ರ. ಹೌದು ನಿತ್ಯ ಜೀವವು ನಮಗಾಗಿ ಅದೆ ಇದನ್ನು ನಾವು ಅರಿತ್ತಿದ್ದೇವೆ!

ಹೇಗೂ ನಾವುಗಳು ನಿರೀಕ್ಷೆ ಹೊಂದಿದವರ ಗುಂಪಿಗೆ ಸೇರಿದವರಾಗಿರಬೇಕು. ವಾಷಿಂಗ್‌ಟನ್‌ನ ಪ್ರಮುಖ ಸುದ್ದಿ ಪತ್ರಿಕೆಯ ತಲೆಬರಹದಲ್ಲಿ ಯಾರಿಗಾದರೂ ಏನೂ ಎಲ್ಲಿ ಎಂಬ ಸಂಗತಿಯು ತಿಳಿದಿದೆಯೇ? ಎಂಬ ಪ್ರಶ್ನೆಯನ್ನು ನೀಡಲಾಗಿತ್ತು. ಇಲ್ಲಿ ಕಾನೂನು ರಚನೆ ಮಾಡುವ ಒಬ್ಬ ಸಹೋದ್ಯೋಗಿಯ ಕೆಟ್ಟ ನಡವಳಿಕೆಯ ಬಗ್ಗೆ ಬಿಂಬಿಸಲಾಗಿತ್ತು. ಇದರಿಂದ ಅವರಿಗೆ ಸಮಸ್ಯೆಯಾಗಿತ್ತು. ಯಾರಿಗೆ ಏನು, ಎಲ್ಲಿ ಎಂಬದು ತಿಳಿದಿದೆ? ನಿತ್ಯ ಜೀವದ ಬಗ್ಗೆ ಈ ಪ್ರಶ್ನೆಯು ಅಗತ್ಯವಾಗಿದೆ. ಯೋಹಾನನ ದಿನದವರು ತಮ್ಮಲ್ಲಿ ಯಾರಿಗೆ ನಿತ್ಯ ಜೀವವಿದೆ ಎಂಬದನ್ನು ಅರಿಯಬೇಕಿತ್ತು. ಅದನ್ನು ಅವನು ಯಾವಾಗ ಪಡೆದುಕೊಳ್ಳುವನು?

ನಂಬಿಗಸ್ತನಾದ ದೇವರ ಮಗನು ಮಾತ್ರ ನಿತ್ಯ ಜೀವ ಹೊಂದಲು ಸಾಧ್ಯ! ಒಬ್ಬನು ಕ್ರಿಸ್ತನನ್ನು ನಂಬಿ ಮಾನಸಾಂತರಪಟ್ಟು ಅರಿಕೆ ಮಾಡಿ, ದೀಕ್ಷಾಸ್ನಾನ ಹೊಂದುವದಾದರೆ ಆ ನಿತ್ಯ ಜೀವವನ್ನು ಪಡೆಯಬಹುದು. ನೀನು ಈ ಹೆಜ್ಜೆಯನ್ನು ಇಡದೆ ಹೋದರೆ, ನಿತ್ಯ ಜೀವ ಹೊಂದಿರುವದಿಲ್ಲ ಎಂದು ಅರಿತಿರುತ್ತಿ!

ಒಬ್ಬನು ಉತ್ತಮವಾದ ಕ್ರೈಸ್ತಿಯ ಜೀವಿತವನ್ನು ಜೀವಿಸುವದಾದರೆ ಅವರು ಕ್ರಿಸ್ತನ ಜ್ಞಾನವನ್ನು ಪಡೆಯಲಿ. "ಒಬ್ಬನಿಗೆ ಎಲ್ಲಿ?" ಏನು ಎಂಬದು ತಿಳಿದಿದೆಯೇ? ನೀನು ಈ ಜೀವವನ್ನು ಪಡೆದಿರುವೆಯಾ ಅಥವಾ ಅವಿಧೇಯತೆಯ ಅಥವಾ ನಿರ್ಲಕ್ಷದ ನಿಮಿತ್ತ ಅದನ್ನು ಕಳಕೊಂಡಿರುವೆಯಾ? ಆದರೆ ನೀನು ನಿನ್ನ ಪಾಪಗಳಿಗೆ ಮಾನಸಾಂತರ ಪಡುವದಾದರೆ, ಪುನಃ ಕ್ರೈಸ್ತನಾಗುವ ಸಾಧ್ಯತೆಯಿದೆ. ಪಾಪಕ್ಷಮೆಗಾಗಿ ಪ್ರಾರ್ಥಿಸು (ನೋಡಿರಿ ಅಪೊಸ್ತಲರ ಕೃತ್ಯಗಳು 8:22; 1 ಯೋಹಾನ 1:9; ಲೂಕ 11:4ಎ; 1 ಯೋಹಾನ 1:16).

ಟಿಪ್ಪಣೆಗಳು

[1]ಯೋಹಾನ "ನಿತ್ಯ ಜೀವದ" ಬಗ್ಗೆ ಆಸಕ್ತನಾಗಿದ್ದನು (1:2), ದೇವರ ಚಿತ್ತವನ್ನು ನೆರವೇರಿಸುವವನು ಅದನ್ನು ಹೊಂದಿದ್ದಾನೆ (2:17). ದೇವರು ಅದನ್ನು ವಾಗ್ದಾನ ಮಾಡಿರುವನು (2:25). "ಕೊಲೆಗಾರನು ಅದನ್ನು ಹೊಂದಿರುವದಿಲ್ಲ" (3:15). ಆ ಜೀವವು ಯೇಸುವಿನಲ್ಲಿ ಅಡಗಿದೆ (5:11). "ದೇವರ ಮಗನು" ಬಂದು ನಾವು ಸತ್ಯವಾಇರುವಾತನನ್ನು ಅರಿತುಕೊಳ್ಳುವ ಹಾಗೆ ನಮಗೆ ವಿವೇಕವನ್ನು ಕೊಟ್ಟಿದ್ದಾನೆಂಬುದು ನಮಗೆ ಗೊತ್ತದೆ (5:20). [2]ನೋಡಿರಿ ಗಲಾತ್ಯ 5:4; ಇಬ್ರಿಯ 6:4-6; 1 ಕೊರಿಂಥ 10:12; ಯಾಕೋಬ 5:19, 20. [3]ನಂಬಿಗಸ್ತಿಕೆಯು, ಕ್ರೈಸ್ತ ಜೀವಿತವನ್ನು ಸಂತೈಸುತ್ತದೆ. (ನೋಡಿ 2:29; 3:6; 3:15; 3:19; 5:2; 5:18.) [4]J. W. Roberts ಪ್ರಕಾರ, ಗುಣಮಟ್ಟದ ಜೀವಿತ, ದೇವರ ಗುಣಮಟ್ಟದ ಜೀವಿತವನ್ನು ಒಬ್ಬ ವಿಶ್ವಾಸಿಗೆ ನೀಡಲಾಗಿದೆ (2 ಪೇತ್ರ 1:4). (J. W. Roberts, *The Letters of John,* The Living Word Commentary [Austin, Tex.: R. B. Sweet Co., 1968], 27.) Dub McClish ಪ್ರಕಾರ ವಿಶ್ವಾಸಿಗಳು ಈಗ ನಿತ್ಯ ಜೀವವನ್ನು ಹೊಂದದೆ, *ವಾಗ್ದಾನವನ್ನು* ಮಾತ್ರ ಹೊಂದಿರುವರು. (Dub McClish, "Eternal Life Is in the Son," *Denton Lectures* [1987], 246-47.) [5]1 ಯೋಹಾನ 1:1-4, ಪರಿಚಯ, 1 ಯೋಹಾನ 5:18-21 ಮುಖ್ಯಾಂಶ, ನಿತ್ಯ ಜೀವ ಹೊಂದುವ ಉದ್ದೇಶದಿಂದ ಇದನ್ನು ಬರೆಯಲಾಗಿದೆ. (1) ದೇವರ ಮಕ್ಕಳು ಪಾಪದಲ್ಲಿ ಮುಂದುವರೆಯುವದಿಲ್ಲ (ವಚನ 18), (2) ಅವರು ದೇವರ ಅನ್ಯೋನ್ಯತೆಯಲ್ಲಿರುವರು ("ದೇವರು"; ವಚನ 19), ಮತ್ತು (3) ಯೇಸು ದೇವ ಕುಮಾರನು (ವಚನ 20). [6]ವಚನ 13 ಯೋಹಾನದಲ್ಲಿ "ಓದುಗರು ತಮ್ಮ ಸ್ಥಾನವನ್ನು ಅರಿಯುವ ಸಲುವಾಗಿ, ಈ ಪತ್ರಿಕೆಯನ್ನು ಬರೆಯಲಾಗಿದೆ" (W. E. Vine, *The Epistles of John: Light, Love, Live* [Grand Rapids, Mich.: Zondervan Publishing House, 1970], 102). [7]"ನಂಬುವವರು" ಅಂದರೆ (NIV) "ವರ್ತಮಾನದಲ್ಲಿ ಪಾಲುದಾರರು, ... ನಂಬಿಕೆಯ ಅಭ್ಯಾಸದಲ್ಲಿರುವವರು" (Stephen S. Smalley, *1, 2, 3 John,* Word Biblical Commentary [Waco, Tex.: Word Books, 1984], 266). [8]ಹೋಶಿಸಿ ಮತ್ತಾಯ 7:7-11. [9]ವಿಗ್ರಹ ಆರಾಧನೆಯ ಬಗ್ಗೆ ಕಡೆಯಲ್ಲಿ ತಿಳಿಸಿದೆ. [10]Morris Womack, ರವರ ಅನುವಾದ ಮೊಲನೆಯದಾಗಿ ವಿಗ್ರಹದಿಂದ ದೂರವಿರಬೇಕು ... ಎರಡನೇಯದಾಗಿ ಸುಳ್ಳು ಬೋಧಕರ ಸೃಷ್ಟಿ ... ಎಫೆಸದ ಧಾರ್ಮಿಕ ಪರಿಸ್ಥಿತಿ ... ದೇವರ ಮತ್ತು ಮನುಷ್ಯರ ನಡುವಿನ ಆಸಕ್ತಿ ಇಲ್ಲದ ಸಂಗತಿಗಳು, ವಿಗ್ರಹ ಎಂದಿರಬಹುದು (Morris Womack, "Keep Yourself from Idols," *Truth for Today* 6 [November 1985]: 21-22). ಯೇಸು ಇದನ್ನು ವಿರೋಧಿಸುತ್ತಾನೆ. Thomas F. Johnson ರವರು, *1, 2, and 3 John,* New International Biblical Commentary (Peabody, Mass.: Hendrikcson Publishers, 1993), 141. and John R. W. Stott, *The Epistles of John,* The Tyndale New Testament Commentaries (Grand Rapids, Mich.: Wm. B. Eerdmans Publishing Co., 1960), 197.

[11]Womack, 22-23.